0403

**Fourth Semester of Three Year LL.B. Examination, June/July 2012**
**INSURANCE LAW (Optional – I) (Course – II)**

Duration : 3 Hours    Max. Marks : 100

**Instructions** : 1. Answer all **5** Questions.

2. One essay type and **one** short note question or problem from **each** Unit have to be attempted, which is referred as Part (**a**) and Part (**b**) in all the Units.

3. Figures to the **right** indicate marks.

4. Answer should be written **completely either** in English or in Kannada.

**UNIT – I**

Q. No. 1. (a) Discuss the state control of Insurance business in India. Marks : 15

ಭಾರತದಲ್ಲಿ ವಿಮಾ ವ್ಯವಹಾರದ ಮೇಲೆ ರಾಜ್ಯದ ನಿಯಂತ್ರಣವನ್ನು ಚರ್ಚಿಸಿರಿ.

OR/**ಅಥವಾ**

Explain the history and growth of Insurance in India.

ಭಾರತದಲ್ಲಿನ ವಿಮೆಯ ಇತಿಹಾಸ ಮತ್ತು ಬೆಳವಣಿಗೆಯನ್ನು ವಿವರಿಸಿ.

(b) Insurance Market. Marks : 5

ವಿಮಾ ಮಾರುಕಟ್ಟೆ .

OR/**ಅಥವಾ**

Investment of Life fund.

ಜೀವ ನಿಧಿಯ ಹೂಡಿಕೆ.

**UNIT – II**

Q. No. 2. (a) What is Premium ? What is the effect of non payment of premium on the policy ? What reliefs are provided against the forfeiture of the policy for non-payment of premium. Marks : 15

ವಿಮಾಕಂತು ಎಂದರೇನು ? ವಿಮಾ ಪಾಲಿಸಿಯ ಮೇಲೆ ಕಂತು ಪಾವತಿಸದಿರುವದರ ಪರಿಣಾಮವೇನು ? ಕಂತು ಪಾವತಿಸದಿರುವ ಪಾಲಿಸಿಯ ಮುಟ್ಟುಗೋಲಿನ ವಿರುದ್ಧ ಇರುವ ಪರಿಹಾರಗಳಾವುವು ?

OR/**ಅಥವಾ**

What is assignment of an insurance policy ? State the rules relating to assignment of policies in contract of Insurance.

ವಿಮಾ ಪಾಲಿಸಿಯ ವರ್ಗಾವಣೆ ಎಂದರೇನು ? ವಿಮೆಯ ಕರಾರಿನಲ್ಲಿ ಪಾಲಿಸಿಯ ವರ್ಗಾವಣೆ ಕುರಿತಂತೆ ಇರುವ ನಿಯಮಗಳನ್ನು ತಿಳಿಸಿ.

(b) Decide the following case : Marks : 5

ಕೆಳಗಿನ ಪ್ರಕರಣ ನಿರ್ಣಯಿಸಿ :

Goutham an insurance policy holder assigned his policy to Guru by endorsing upon the policy. But that assignment of policy from Goutham to Guru was not informed to the Insurance Company. Whether notice to the insurer is necessary for the validity of the assignment ?

ವಿಮಾ ಪಾಲಿಸಿಯನ್ನು ಹೊಂದಿರುವ ಗೌತಮನು, ಗುರು ಎಂಬುವನಿಗೆ ಪಾಲಿಸಿಯನ್ನು ಅದರ ಮೇಲೆ ದೃಢೀಕರಿಸುವ ಮೂಲಕ ವರ್ಗಾಯಿಸಿದ್ದಾನೆ. ಆದರೆ ಈ ಪಾಲಿಸಿಯ ವರ್ಗಾವಣೆಯನ್ನು ವಿಮಾ ಕಂಪನಿಗೆ ತಿಳಿಸಿರುವುದಿಲ್ಲ. ಪಾಲಿಸಿಯ ವರ್ಗಾವಣೆಯ ಮಾನ್ಯತೆಯ ಬಗ್ಗೆ ವಿಮಾಕಂಪನಿಗೆ ತಿಳಿಸುವುದು ಅಗತ್ಯವೆ ?

OR/**ಅಥವಾ**

Ranjith insured on wheat in his warehouse against fire. He sold the wheat to a company of which he was the sole substantial share holder. Thereafter most of the wheat destroyed by fire and he demanded that he should be indemnified. But the insurance company refused to indemnify the loss. Can the Insurance Company do so ?

ರಂಜಿತನು ತನ್ನ ಗೋದಾಮಿನಲ್ಲಿರುವ ಗೋಧಿಗೆ ಬೆಂಕಿಯ ನಷ್ಟದ ವಿರುದ್ಧ ವಿಮಾ ರಕ್ಷಣೆ ಪಡೆದಿದ್ದಾನೆ. ಅವನು ಈ ಗೋಧಿಯನ್ನು ಒಂದು ಕಂಪನಿಗೆ ಮಾರುತ್ತಾನೆ. ಆ ಕಂಪನಿಯಲ್ಲಿ ಇವನು ಹೆಚ್ಚಿನ ಸಂಖ್ಯೆಯ ಶೇರನ್ನು ಹೊಂದಿದ್ದಾನೆ. ನಂತರ ತನ್ನ ಗೋದಾಮಿನಲ್ಲಿದ್ದ ಗೋಧಿಯು ಬೆಂಕಿಯ ಅನಾಹುತದಿಂದ ನಷ್ಟಕ್ಕೆ ಒಳಗಾಗುತ್ತದೆ. ಆ ನಷ್ಟವನ್ನು ತನಗೆ ತುಂಬಿಕೊಡಬೇಕೆಂದು ವಿಮಾ ಕಂಪನಿಯನ್ನು ಕೇಳುತ್ತಾನೆ. ವಿಮಾ ಕಂಪನಿಯು ನಷ್ಟ ತುಂಬಿಕೊಡಲು ನಿರಾಕರಿಸುತ್ತದೆ. ವಿಮಾ ಕಂಪನಿಯು ಹಾಗೆ ನಿರಾಕರಿಸಬಹುದೆ ?

## UNIT – III

Q. No. 3. (a) Who are the persons entitled to payment of Life Insurance money ? Marks : 15

ಜೀವ ವಿಮೆಯ ಹಣವನ್ನು ಯಾವ ವ್ಯಕ್ತಿಗಳು ಪಡೆಯುತ್ತಾರೆ ?

OR/**ಅಥವಾ**

What are the contents of Life Insurance Policy ?

ಜೀವ ವಿಮಾ ಪಾಲಿಸಿಯು ಒಳಗೊಂಡಿರುವ ಅಂಶಗಳಾವುವು ?

(b) Write short note on : Marks : 5

ಲಘು ಟಿಪ್ಪಣಿ ಬರೆಯಿರಿ :

Nature of Life Insurance

ಜೀವವಿಮಾ ಗುಣ ಸ್ವಭಾವ

OR/**ಅಥವಾ**

Compulsory Insurance of Motor Vehicles.

ಮೋಟಾರು ವಾಹನಗಳ ಕಡ್ಡಾಯ ವಿಮೆ.

## UNIT – IV

Q. No. 4. (a) What are the characteristics of Fire Insurance ? Marks : 15

ಅಗ್ನಿ ವಿಮೆಯ ಗುಣ ಲಕ್ಷಣಗಳಾವುವು ?

OR/**ಅಥವಾ**

What are the contents of a Fire Policy ? State its scope.

ಅಗ್ನಿವಿಮೆಯ ಪಾಲಿಸಿಯು ಒಳಗೊಂಡಿರುವ ಅಂಶಗಳಾವುವು ? ಅದರ ವ್ಯಾಪ್ತಿಯನ್ನು ತಿಳಿಸಿ.

(b) Decide the following case : Marks : 5

ಕೆಳಗಿನ ಪ್ರಕರಣವನ್ನು ನಿರ್ಣಯಿಸಿ :

Gowrov insured his car with Galaxy Insurance Company, later with another company called Moon Insurance Company. Gowrov's car become liable in damage to a motor cyclist. Which insurance company is liable to compensate the loss to motor cyclist ?

ಗೌರವ್ ತನ್ನ ಕಾರಿಗೆ ಗೆಲಾಕ್ಸಿ ವಿಮಾ ಕಂಪನಿಯಿಂದ ವಿಮೆ ಪಡೆದಿದ್ದಾನೆ. ನಂತರ ಮೂನ್ ವಿಮಾ ಕಂಪನಿಯಲ್ಲಿಯೂ ತನ್ನ ಕಾರಿಗೆ ವಿಮೆ ಪಡೆದಿದ್ದಾನೆ. ಗೌರವನ ಕಾರು ಒಬ್ಬ ಬೈಕ್ ಸವಾರನಿಗೆ ನಷ್ಟ ಉಂಟುಮಾಡಿದೆ. ಯಾವ ವಿಮಾ ಕಂಪನಿಯು ಬೈಕ್ ಸವಾರನಿಗೆ ನಷ್ಟ ತುಂಬಿ ಕೊಡಬೇಕಾಗುತ್ತದೆ ?

OR/**ಅಥವಾ**

Santhosh insured his sugar in the godown against fire for an amount of Rs. 50 lakhs. In a fire accident his sugar stock worth of Rs. 38 lakhs lost by fire. To what extent insurance co. is liable for the loss.

ಸಂತೋಷ್ ತನ್ನ ಗೋದಾಮಿನಲ್ಲಿ ಸಕ್ಕರೆಗೆ ಅಗ್ನಿವಿಮೆಯನ್ನು ರೂ. 50 ಲಕ್ಷಕ್ಕೆ ಪಡೆದಿದ್ದಾನೆ. ಅಗ್ನಿ ಆಕಸ್ಮಿಕದಿಂದ ತನ್ನ ಸಕ್ಕರೆಯು ರೂ. 38 ಲಕ್ಷದಷ್ಟು ನಷ್ಟವಾಗಿದೆ. ವಿಮಾಕರ್ತನು ಎಷ್ಟು ಮೌಲ್ಯದ ನಷ್ಟಕ್ಕೆ ಹೊಣೆಗಾರನಾಗಿದ್ದಾನೆ ?

## UNIT – V

Q. No. 5. (a) What are the excluded losses under the Marine Insurance. Marks : 15

ಕಡಲ ವಿಮೆಯಲ್ಲಿ ಪರಿಗಣಿಸದಿರುವ ನಷ್ಟಗಳಾವುವು ?

OR/**ಅಥವಾ**

Explain the various kinds of policies in Marine Insurance.

ಕಡಲ ವಿಮೆಯಲ್ಲಿನ ವಿವಿಧ ಪಾಲಿಸಿಗಳನ್ನು ವಿವರಿಸಿ.

(b) Decide the following case : Marks : 5

ಕೆಳಗಿನ ಪ್ರಕರಣವನ್ನು ತೀರ್ಮಾನಿಸಿ :

The rats grawed a hole in a pipe and sea water entered damaging the cargo of wheat and there was no negligence on the port of the carrier. Whether insurance company is liable for the loss ?

ಹಡಗಿನಲ್ಲಿ ಇಲಿಗಳು ಹಡಗಿನ ಪೈಪಿನಲ್ಲಿ ರಂಧ್ರ ಮಾಡಿದ್ದು ಈ ರಂಧ್ರದ ಮೂಲಕ ಸಮುದ್ರದ ನೀರು ಹಡಗಿನಲ್ಲಿ ನುಗ್ಗಿ ಹಡಗಿನಲ್ಲಿದ್ದ ಗೋಧಿಗೆ ಹಾನಿಯುಂಟುಮಾಡಿದೆ. ಹಡಗಿನ ಸರಕು ಸಾಗಣೆದಾರ ಯಾವುದೇ ನಿರ್ಲಕ್ಷ ತೋರಿರುವುದಿಲ್ಲ. ವಿಮಾ ಕಂಪನಿಯು ಹೊಣೆಗಾರನಾಗುತ್ತದೆಯೇ ?

OR/**ಅಥವಾ**

The policy on a ship on a round voyage from Mumbai to Chennai. But from Chennai to Mumbai she neglected to take sufficient coal as its fuel to reach Mumbai and as a consequence she had to burn some her fittings and cargo as fuel and claimed the loss. Whether insurer is liable for such a loss ?

ಒಂದು ಹಡಗಿಗೆ ಮುಂಬಯಿಯಿಂದ ಚನ್ನೈಗೆ ಮತ್ತು ಚನ್ನೈಯಿಂದ ಮುಂಬಯಿಗೆ ಪ್ರಯಾಣಿಸಲು ಹಡಗಿನ ಯಾನ ಪಾಲಿಸಿಯನ್ನು ನೀಡಿದೆ. ಆದರೆ ಚನ್ನೈಯಿಂದ ಮುಂಬಯಿಗೆ ಹಡಗು ಪ್ರಯಾಣಿಸುವಾಗ ತನ್ನ ನಿರ್ಲಕ್ಷ್ಯತನದಿಂದ ಕಲ್ಲಿದ್ದಲನ್ನು ಅದರ ಉರುವಲಾಗಿ ತುಂಬಿಸಿಕೊಂಡಿಲ್ಲ. ಆ ಪರಿಣಾಮವಾಗಿ ಹಡಗು ತನ್ನ ಕೆಲವು ಉಪಕರಣಗಳನ್ನು ಮತ್ತು ಸರಕುಗಳನ್ನು ಉರುವಲಾಗಿ ಬಳಸಿದೆ. ಈ ನಷ್ಟವನ್ನು ತುಂಬಿಕೊಡಲು ಕೇಳಿದೆ. ವಿಮಾ ಕಂಪನಿಯು ಈ ನಷ್ಟಕ್ಕೆ ಹೊಣೆಗಾರನೇ ?